## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2014-15ನೇ ಸಾಲಿನಲ್ಲಿ ಸೌರ ಬೆಳಕು ಯೋಜನೆಯಡಿ ಹೆಚ್ಚುವರಿ ಅನುದಾನ ಬಿಡುಗಡೆ ಕುರಿತು.
ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/22/ಜೈಅಯೋ/2014, ಬೆಂಗಳೂರು, ದಿನಾಂಕ 06.02.2015

**ಪ್ರಸ್ತಾವನೆ :**

2014-15ನೇ ಸಾಲಿಗೆ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ತೆಗ್ಗಿ ಮತ್ತು ಯಡಹಳ್ಳಿ ಗ್ರಾಮಗಳಲ್ಲಿ ಸೌರ ಬೀದಿ ದೀಪಗಳನ್ನು ಅಳವಡಿಸಲು ಸರ್ಕಾರದಿಂದ ರೂ.71.25 ಲಕ್ಷಗಳನ್ನು ಉಲ್ಲೇಖಿತ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿತ್ತು. ತಮ್ಮ ಆದೇಶದ ಪತ್ರ ಸಂಖ್ಯೆ : ಜಿಪಂಬಾ/ಐ.ಆರ್.ಇ.ಪಿ./ಸೌರ ಬೆಳಕು ಯೋಜನೆ/ಸಿಆರ್/38/2014-15/5334 ದಿನಾಂಕ 13.03.2015ರಲ್ಲಿ ಟೆಂಡರ್ ಪ್ರಕಾರ 10 ಕಿ.ವ್ಯಾ ಸೌರ ಘಟಕಕ್ಕೆ ದರ ರೂ.30.90 ಲಕ್ಷಗಳಂತೆ ಅನುಷ್ಠಾನದ ಆದೇಶವನ್ನು ನೀಡಲಾಗಿರುತ್ತದೆ.

ಇದೇ ದರದ ಮಿತಿಯೊಳಗೆ ಅಳವಡಿಸಿಕೊಂಡು ಇನ್ನು ಹೆಚ್ಚುವರಿಯಾಗಿ ಸೌರ ಬೀದಿ ದೀಪಗಳನ್ನು ಅಳವಡಿಸುವ ಉದ್ದೇಶಕ್ಕಾಗಿ ಸರ್ಕಾರದಲ್ಲಿ ಸದರಿ ಯೋಜನೆಯಡಿ ಉಳಿತಾಯವಾಗಿರುವ ರೂ. 10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿದೆ ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/22/ಜೈಅಯೋ/2014, ಬೆಂಗಳೂರು, ದಿನಾಂಕ 27.03.2015**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ₹ **10.00** ಲಕ್ಷಗಳನ್ನು (ರೂ. ಹತ್ತು ಲಕ್ಷಗಳು ಮಾತ್ರ) ಬಾಗಲಕೋಟೆ ಜಿಲ್ಲಾ ಪಂಚಾಯತ್‌ಗೆ 2014-15ನೇ ಸಾಲಿನ ಸೌರ ಬೆಳಕು ಯೋಜನೆಯ ಅನುಷ್ಠಾನಕ್ಕಾಗಿ ಲೆಕ್ಕ ಶೀರ್ಷಿಕೆ 2810-01-198-1-01-300 ಯೋಜನೆ ಅಡಿಯಲ್ಲಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಈ ಅನುದಾನವನ್ನು ಪೂರ್ಣವಾಗಿ ಬಳಕೆ ಮಾಡುವುದು ಹಾಗೂ ಅನುದಾನ ವ್ಯಪಗತವಾಗದಂತೆ ಕ್ರಮವಹಿಸುವುದು ಮತ್ತು ಹಣ ಬಳಕೆ ಪ್ರಮಾಣ ಪತ್ರವನ್ನು ಶೀಘ್ರವಾಗಿ ಸಲ್ಲಿಸತಕ್ಕದ್ದು.

ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿರುತ್ತದೆ ಹಾಗೂ ಗಾಂಧಿ ಸಾಕ್ಷಿ ಕಾಯಕ ಯೋಜನೆಯಲ್ಲಿ ಅಳವಡಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

ಹಾಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ/2/ವೆಚ್ಚ-6/2015 ದಿನಾಂಕ 02.02.2015ರಲ್ಲಿ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿನ್. ಕೃಷ್ಣಪ್ಪ) 27/3/15
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ಜಿಲ್ಲೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ.
7. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್ ನಂ. 49, ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜ ಭವನ, ಸೌತ್ ಎಂಟ್ರನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.